ಬಹಳ ಗೊಂದಲವಾಗೋದು, ನಮ್ಮಿಬ್ಬರಲ್ಲಿ ಅಂಚಿ ಯಾರು ಅಂತಾ. ಅವರಿಗೆ ನಾನು ತುಂಬಾ ಆಟ ಆಡಿಸ್ತಿದ್ದೆ. ಇದೆಲ್ಲಾ ನಾನು ಹೇಳುತ್ತಿರುವುದು ಮೂರು ವರ್ಷದ ಹಿಂದೆ' ಎಂದು ತಾನೂ ಚಹಾ ಕುಡಿಯುತ್ತಾ ಕೀರ್ತಿಮಾನನಿಗೂ ಹಾಗೇ ಸೂಚಿಸಿದಳು ಕಂಚಿ.

'ಆಗೆಲ್ಲಾ ನಾನೇ ಇವರಿಬ್ಬರಿಗೂ ಸಹಾಯ ಮಾಡಿ ದೊಡ್ಡ ದೊಡ್ಡ ರೋಲ್ಸ್ ಕೊಡಿಸಿದ್ದು...' ಎಂದು ತನ್ನ ದೊಡ್ಡಸ್ತಿಕೆ ಹೇಳಿಕೊಂಡ ರಾಜೂ.

ಕೀರ್ತಿಮಾನ್ ಚಹಾ ಕುಡಿದು ಮನದಲ್ಲೇ ಅದರ ರುಚಿ ಚೆನ್ನಾಗಿದೆ, ರಾಜೂಗೆ ಚಹಾ ಆದರೂ ನೆಟ್ಟಗೆ ಮಾಡಲು ಬರುತ್ತದೆ ಎಂದುಕೊಂಡ.

'ರಾಜೂ, ನಿನಗೆ ಡ್ರಾಮಾ ಅಲ್ಲದೇ ಮಾಡೆಲಿಂಗ್‌ನಲ್ಲಿ ಜಾಹೀರಾತು ಕಂಪನಿಗಳೂ ಗೊತ್ತಿದ್ದವೆ?' ಎಂದ. ಕೀರ್ತಿಮಾನ್ ತಲೆಯಲ್ಲಿ ಇವರ ಹಿನ್ನೆಲೆ ಸಿದ್ಧವಾಗುತ್ತಿದೆ.

'ಇಲ್ಲ' ಎಂದು ತುಟಿಯುಬ್ಬಿಸಿದ ರಾಜೂ.

'ಗೊತ್ತಿದ್ದರೆ ನಮ್ಮ ಕಂಚೀಗೂ ಅದರಲ್ಲಿ ಚಾನ್ಸ್ ಕೊಡಿಸುತ್ತಿದ್ದೆ. ಕಂಚೀನೂ ಅಕ್ಕನ ಜತೆ ಅಂತದರಲ್ಲಿ ಟ್ರೈ ಮಾಡಿದ್ಲು, ಆದರೆ ಒಂದೇ ಮುಖದ ಇಬ್ಬರು ಯಾಕೆ ಅಂತಾ ಮಾಡೆಲಿಂಗ್ ಆಫರ್ಸ್ ಇವಳಿಗೆ ಬರಲಿಲ್ಲ. ಜತೆಗೆ ಅಂಚನಾ ಮ್ಯಾಮ್‌ಗೆ ಏನೋ ವಿಶೇಷ ಕಲೆಯೂ ಇತ್ತು, ಮಾಡೆಲ್ ಹಾವಭಾವದಲ್ಲಿ'.

'ನೀವು ಅಕ್ಕ ಅನ್ನುವುದು ಆಕೆ ನಿಮಗಿಂತಾ ಕೆಲವೇ ಕ್ಷಣ ಮೊದಲು ಹುಟ್ಟಿದಳೆಂದೆ?' ಎಂದ ಕೀರ್ತಿಮಾನ್ ಕಂಚಿಯತ್ತ ತಿರುಗಿ–

ಹೌದೆಂಬಂತೆ ತಲೆಯಾಡಿಸಿದಳು ಕಂಚಿ.

'ಮೊದಲು ಲೋಕ ಕಂಡೋಳು ಮೊದಲೇ ಹೋಗ್ಬಿಟ್ಲು' ಎಂದು ಬಿಕ್ಕಿದಳು.

'ಕಂಚೀ, ಚೆನ್ನಾಗಿ ಯೋಚಿಸಿ ಹೇಳಿ ಅಕ್ಕನಿಗೆ ಆಗದವರು, ಕೊಲ್ಲುವಂಥ ದ್ವೇಷವಿದ್ದವರು ಯಾರಿದ್ದರು?' ಎಂದ ಕೀರ್ತಿಮಾನ್.

## ನಮ್ಮಕ್ಕ ದೇವತೆಯಂತೆ!

ಕಂಚಿ ಕೈಯಲ್ಲಿದ್ದ ಚಹಾ ಗಾಬರಿಗೆ ತುಳುಕಿತು; ಕಣ್ಣರಳಿಸಿ ಉದ್ರಿಕ್ತಳಾಗಿ ನುಡಿದಳು, 'ಮೈ ಗಾಡ್! ನೋ ನೋ.. ಹಾಗನ್ನಬೇಡಿ.. ನಮ್ಮಕ್ಕ ದೇವತೆಯಂತೆ. ಮದುವೆಯಾದ ಮೇಲೂ ಬಡವರಿಗೆಲ್ಲ ದಾನ ಧರ್ಮ ಅಂತಾ ಚ್ಯಾರಿಟಿ ಮಾಡೋಳು. ನನ್ನ ಕಂಡರೆ ಪಂಚಪ್ರಾಣ. ಇದೇ ಹಾಳು ಪಾಲಿಸಿ ಮಾಡಿಸಬೇಕು ಅಂತಾ ಅವಳಿಗೆ ಆ ನಿಮ್ಮ ಶರಭ್ ತಲೆ ತಿಂದು ಬಿಟ್ಟನಂತೆ. ಜಪ್ಪಯ್ಯಾ ಅಂದರೂ ಬಿಡದೇ ಅದನ್ನು ಹಿಡಿದು ಬಿಟ್ಟಳು ಸಾರ್. ಬೇಡವೇ ಮಹರಾಯಿತಿ ಅಂತಾ ನಾನು ಗೋಗರೆದರೂ ಕೇಳಲಿಲ್ಲ. ನನಗೆ ಇಂಥದರ ಲ್ಲೆಲ್ಲಾ ಬಿಲ್ಕುಲ್ ಇಷ್ಟವಿರಲಿಲ್ಲ. ಈಗ ನೋಡಿ.. ಎಲ್ಲರೂ ನನ್ನ ಬಗ್ಗೆ ಅಕ್ಕನನ್ನು ಕೊಲ್ಲಿಸಿ ದುಡ್ಡು ನುಂಗಕ್ಕೆ ಮಾಡಿಸಿದಳು ಅನ್ನೋಲ್ವೆ?' ಎಂದು ಕಣ್ಣೊರೆಸಿ ಕೊಂಡಳು ನಟೀಮಣಿ. ಕೃತಕ ಅಭಿನಯವೇನೂ ಅದರಲ್ಲಿ ಕಾಣಲಿಲ್ಲ ಕೀರ್ತಿಮಾನನಿಗೆ.

ಕೀರ್ತಿಮಾನ್ ಲೊಚಗುಟ್ಟಿ ತನ್ನ ಮಾತು ಆ ಅರ್ಥದಿಂದಲ್ಲವೆಂದು ಸೂಚಿಸಿದ. 'ಛೆ, ನಾನು ಹಾಗೆ ನಿಮ್ಮ ಬಗ್ಗೆ ಭಾವಿಸಿಲ್ಲ. ಇದು ನಮ್ಮ ಪ್ರಶ್ನೆ ಕೇಳುವ ಧಾಟಿ ಅಷ್ಟೇ. ಪೊಲೀಸ್ ಕೂಡಾ ಹೀಗೇ ಕೇಳಿಯಾರು. ಇರಲಿ, ಇನ್ನು ಶಶಿಧರ್‌ಗೂ ನಿಮ್ಮಕ್ಕನಿಗೂ ಸಂಬಂಧ ಹೇಗಿತ್ತು? ಏನಾದರೂ ವೈಮನಸ್ಯ?'

ಕಂಚಿ ಹಿಂಜರಿಯುತ್ತಾ ನುಡಿದಳು.

'ನನಗೆ ಗೊತ್ತಿದ್ದ ಮಟ್ಟಿಗೆ ಇಲ್ಲ. ಆದರೂ ಒಳಗೊಳಗೇ ಇದ್ದಿರ ಬಹುದೇನೋ, ಅಕ್ಕ ಏನೂ ಹೇಳುತ್ತಿರಲಿಲ್ಲ. ನನಗೆ ತಿಳಿದಂತೆ ಭಾವನಿಗೆ ಅಕ್ಕನ ಮೇಲೆ ಮೊದಲಿನಿಂದ ವಿಪರೀತ ಪ್ರೀತಿ, ಎಲ್ಲಾ ಕಡೆ ಜತೆಗೇ ಕರಕೊಂಡು ಹೋಗೋರು. ಅವಳಿಗೆ ಬೇಕಿದ್ದಷ್ಟು ಹಣ ಸುರಿಯೋರು. ಇನ್ನು ವಿರಸ ಏತಕ್ಕೆ?' ದನಿಯಲ್ಲಿ ಒಂದೆಳೆ ಅಸೂಯೆ ಹಾದು ಹೋಯಿತೆನಿಸಿತು ಕೀರ್ತಿಮಾನನಿಗೆ.

ಕೀರ್ತಿಮಾನ್ ನಿಟ್ಟುಸಿರಿಟ್ಟ. ತನಗೆ ಹೊಸ ಸುಳಿವೇನೂ ದೊರೆಯುತ್ತಿಲ್ಲ, ಸುಮ್ಮನೆ ಸಮಯ ಹಾಳಾಗುತ್ತಿದೆ.

ಕೊನೆಯದಾಗಿ 'ಕಂಚಿ, ನಿಮ್ಮಿಬ್ಬರನ್ನೂ ಸಾಕಿ ಸಲುಹಿದ ಆ ತೆರೇಸಮ್ಮ ಆಂಟಿಯ ವಿಳಾಸವೇನಾದರೂ ಗೊತ್ತೆ?' ಎಂದ.

ಕಂಚಿ ತಟಕ್ಕನೆ ಇವನು ಹುಚ್ಚನೋ ಎಂಬಂತೆ ನೋಡಿದಳು, 'ತೆರೇಸಮ್ಮ ಆಂಟಿನಾ? ಅವರನ್ನು ಮರೆತು ಎಷ್ಟೋ ವರ್ಷವಾಯಿತು ನಾವು. ಎಲ್ಲಿದ್ದಾರೋ.. ಇದ್ದಾರೋ ಇಲ್ವೋ.?' ಎಂದವಳು ಚಹಾ ಕಪ್ ಕೆಳಗಿಟ್ಟು ಹರಿತವಾದ ದನಿಯಲ್ಲಿ ಮತ್ತೆ ಹೇಳಿದಳು:

'ಓಹ್, ನಾನು ಹೇಳಿದ್ದು ನಿಮಗೆ ಸಮಾಧಾನವಾಗಲಿಲ್ಲ. ಚೆಕ್ ಮಾಡಬೇಕಿತ್ತೇನೋ ಅದನ್ನೆಲ್ಲಾ? ಹೇಗೂ ಪತ್ತೇದಾರರಲ್ಲವೆ?'

ಅವಳ ಕೆಣಕು ನುಡಿಯಿಂದ ಕೀರ್ತಿಮಾನ್ ಸಂಕೋಚಪಡುತ್ತಾನೆಂದು ನಿರೀಕ್ಷಿಸಿದ್ದರೆ ಈ ಬಾರಿ ಹಾಗಾಗಲಿಲ್ಲ. ಅವನು ದೃಢವಾದ ದನಿಯಲ್ಲಿ, 'ಕಂಚಿ, ಪ್ಲೀಸ್, ನನಗೆ ನನ್ನ ಕೆಲಸ ಮಾಡಲು ಬಿಡಿ..ನೀವು ವಿಳಾಸ ಇದ್ದರೆ ಕೊಟ್ಟು ಆರಾಮ ಮಾಡಿ. ನಿಮಗೆ ಬಹಳ ಸ್ಟ್ರೈನ್ ಮಾಡಿಬಿಟ್ಟೆ ಅನ್ನಿಸತ್ತೆ' ಎಂದು ಏಳುವ ಸೂಚನೆ ತೋರ್ಪಡಿಸಿದ.

'ಇರಿ, ನೋಡುತ್ತೇನೆ..'ಎಂದು ಅಸಹನೆ ತೋರುತ್ತಲೇ ಎದ್ದು ಹೋದಳು ಕಂಚಿ.

'ರಾಜೂ, ನಿನಗೂ ಅಂಚನಾಗೂ ಹೇಗಿತ್ತು ಸಂಬಂಧ ಹೇಳು?' ಎಂದ ಈಗ ಕೀರ್ತಿಮಾನ್ ರಾಜೂ ಕಡೆ ತಿರುಗಿ.

ರಾಜೂ ಕಣ್ಣರಳಿಸಿ ಇದು ವಿಚಿತ್ರವೆಂಬಂತೆ ನೋಡಿದ 'ಸಾರ್, ಇಬ್ಬರನ್ನೂ ಒಂದೇ ತರಹ ನೋಡಿದವನು ನಾನು. ಅಂಚನಾ ಮೇಡಮ್ ಸ್ವಲ್ಪ ಆಂಬೀಶಿಯಸ್ ಆಗಿದ್ದರು. ಧನದಾಹ ಹೆಚ್ಚು. ಇವಳಿಗೂ ಅಷ್ಟೇ! ಇನ್ನೂ ದೊಡ್ಡ ರೋಲ್ ಇಲ್ಲವೇ ಒಳ್ಳೇ ಕಂಪನಿ ಕಾಂಟ್ರ್ಯಾಕ್ಟ್ ಕೊಡಿಸು ಅಂತಾ ನನಗೆ ದುಂಬಾಲು ಬೀಳುತ್ತಿರುತ್ತಾಳೆ. ಆದರೆ ಅಕ್ಕನಷ್ಟು ಜಾಣೆಯಲ್ಲ.. ಹಾಗಾಗಿ ಇವಳಿಗೆ ಇನ್ನು ಯಾವ ಶ್ರೀಮಂತರ ಸಹವಾಸದ ಅವಕಾಶವೂ ಬರಲೇ ಇಲ್ಲ' ಎಂದ ಕಂಚಿಯ ಈ ಸಾಧನೆ ತನ್ನ ಮಟ್ಟಿಗೆ ಕಡಿಮೆ ಎನಿಸಿದಂತೆ. ಅಲ್ಲದೆ ಧನದಾಹ ಅವರಿಗೆ ಹೆಚ್ಚು ಎನ್ನುತ್ತಾನೆ ಕೊರಮ! ಇವನಿಗಿಲ್ಲವೆ? ಎನಿಸಿತು ಪತ್ತೇದಾರನಿಗೆ.

ಕೀರ್ತಿಮಾನ್ ಇದನ್ನೆಲ್ಲಾ ಅರಗಿಸಿಕೊಳ್ಳುವಂತೆ ಸುಮ್ಮನಿದ್ದ.

ರಾಜೂ ಮುಂದುವರೆಸಿದ, 'ನನ್ನ ಕಂಡರೆ ಇತ್ತೀಚೆಗೆ ಅಂಚೀ ಮೇಡಮ್‌ಗೆ ಅಷ್ಟಕ್ಕಷ್ಟೇ. ಏನೋ, ನನ್ನಿಂದಲೇ ತಂಗಿಯ ಅದೃಷ್ಟ ಖುಲಾಯಿಸಲಿಲ್ಲ ಎಂಬಂತೆ ಒಂಥರಾ ಮಾತಾಡಿಸುತ್ತಿದ್ದರು. ಇದೆಲ್ಲಾ ಶಶಿಧರ್‌ರಂತಾ ಶ್ರೀಮಂತರನ್ನು ಮದುವೆಯಾಗಿ ಮೋಜಿನ ಜೀವನ ನಡೆಸಲು ಆರಂಭಿಸಿದ ಮೇಲೆ ಸಹಜವೇನೋ ಎಂದು ನಾನೂ ಸುಮ್ಮನಿರುತ್ತಿದ್ದೆ'.

ಕಂಚಿ ಹೊರಬಂದು ಒಂದು ವಿಸಿಟಿಂಗ್ ಕಾರ್ಡಿನ ಮೇಲೆ ಬರೆದ ವಿಳಾಸ ತೋರಿಸಿ, ಕೀರ್ತಿಮಾನನಿಗೆ 'ಇದೇ ನಾವು ತೆರೇಸಮ್ಮ ಜತೆ ಇದ್ದ ಮನೆ ಅಡ್ರೆಸ್. ಐದು ವರ್ಷವಾದರೂ ಆಯ್ತು ನಾವು ಅವರ ಸಂಪರ್ಕ ಬಿಟ್ಟು.. ಆಗಲೇ ಎಪ್ಪತ್ತು ವರ್ಷವಾಗಿತ್ತು ಆಂಟಿಗೆ' ಎಂದಳು ಕಾರ್ಡ್ ಕೊಡುತ್ತಾ. ಆ ದನಿಯಲ್ಲಿ ನೀನಿನ್ನೇನು ಅವರಿಂದ ಕಂಡುಹಿಡಿಯಬಲ್ಲೆ ಎಂಬ ಸವಾಲಿದ್ದಂತಿತ್ತು.

ಕೀರ್ತಿಮಾನ್ ಎದ್ದು, 'ಸರಿ, ನಾನು ಇನ್ನು ಕೆಲವು ದಿನ ಬಿಟ್ಟು ಬಂದರೂ ಬರುತ್ತೇನೆ.. ನಿಮ್ಮ ಈ ಕೇಸ್ ಎಲ್ಲಾ ಮುಗಿದು ಸರಿ ಹೋದರೆ ಆ ಪಾಲಿಸಿ ಹಣ ಪಾವತಿಗೆ ಶಿಫಾರಸು ಮಾಡುತ್ತೇನೆ..' ಎಂದು ಅವರಿಬ್ಬರನ್ನು ಸೂಕ್ಷ್ಮವಾಗಿ ಗಮನಿಸಿದ.

ಎಷ್ಟು ಪ್ರಯತ್ನಪಟ್ಟರೂ, ಹಣದ ಮಾತು ಬಂದಾಗ ಅವರಿಬ್ಬರ ಕಣ್ಣಿನಲ್ಲಿ ಮಿಂಚಿ ಹೋದ ಹೊಳಪನ್ನು ಅವರು ಆ ದುಃಖದಲ್ಲೂ ಬಚ್ಚಿಡಲಾಗಲಿಲ್ಲ. 'ಮನಿ ಈಸ್ ಥಿಕ್ಕರ್ ದ್ಯಾನ್ ಬ್ಲಡ್' ಎಂದು ಗಾದೆಯನ್ನು ಬದಲಾಯಿಸ ಬೇಕು ಎನಿಸಿತು ಅವನಿಗೆ.

ಹೊರಗೆ ತನ್ನ ಕಾರನ್ನು ಜೋಪಾನವಾಗಿ ಕಾಯುತ್ತಿದ್ದ ಸಿ.ಎಸ್.ಕೆ. ಕ್ರಿಕೆಟ್ ಫ್ಯಾನ್ ಹುಡುಗನಿಗೆ ಇನ್ನೂ ಹತ್ತು ರೂಪಾಯಿ ಹೆಚ್ಚು ಟಿಪ್ಸ್ ಕೊಟ್ಟು ಅಲ್ಲಿಂದ ಸರ್ರನೆ ಹೊರಟ ಕೀರ್ತಿಮಾನ್.

## ಮರಣೋತ್ತರ ಪರೀಕ್ಷೆ ವರದಿ

ಮಾರನೇ ದಿನ ಬೆಳಿಗ್ಗೆ 10 ಕ್ಕೆಲ್ಲಾ ತನ್ನ ಆಫೀಸಿನಲ್ಲಿ ಮರಣೋತ್ತರ ಪರೀಕ್ಷೆಯ ರಿಪೋರ್ಟ್ ಮತ್ತು ಪ್ರಥಮ ತನಿಖಾ ವರದಿ ಓದುತ್ತಿದ್ದಾನೆ ಕೀರ್ತಿಮಾನ್. ಅವನ ಬಾಸ್ ಭೀಮರಾವ್ ತಮ್ಮ ಪ್ರಭಾವ ಬಳಸಿ ಪೊಲೀಸ್ ಕಮೀಶನರ್ ಕಚೇರಿಯಿಂದ ಫ್ಯಾಕ್ಸ್ ಮಾಡಿಸಿ ತರಿಸಿಕೊಟ್ಟಿದ್ದಾರೆ. ಅವನಿಗೆ ಕೊಟ್ಟು 'ನೀನೂ ಲೇಟ್ ಮಾಡಬೇಡ. ಬೇಗ ಕಂಡುಹಿಡಿ...' ಎಂದು ಆಗ್ರಹಿಸಿ ತೆರಳಿದ್ದರು ಭೀಮರಾವ್.

ಆ ಶವ ಪರೀಕ್ಷೆ ವರದಿಯ ಪ್ರಕಾರ ಮೃತ ಮಹಿಳೆಯ ದೈಹಿಕ ವಿವರ ಗಳೆಲ್ಲಾ ತಿಳಿಸಿ, 'ಆಕೆಯ ತಲೆಯ ಹಿಂಭಾಗದಲ್ಲಿ ಯಾವುದೋ ಬಲವಾದ ವಸ್ತುವಿನಿಂದ ಹೊಡೆದ ಪೆಟ್ಟು, ರಕ್ತ ಹೆಪ್ಪುಗಟ್ಟಿರುವುದು ತಿಳಿದು ಬಂದಿದೆ ಎಂದಿದೆ. ಆ ಗಾಯ ಪ್ರಾಯಶಃ ಆಕೆ ನೀರಿನಲ್ಲಿ ಮುಳುಗುವ ಮುನ್ನವೇ ಆಗಿರುವ ಸೂಚನೆಗಳಿರುವುದರಿಂದ 'ಫೌಲ್ ಪ್ಲೇ' (ದುಷ್ಕೃತ್ಯ) ಸಾಧ್ಯತೆಗಳಿವೆ' ಎಂದು ವೈದ್ಯಾಧಿಕಾರಿ ಅಭಿಪ್ರಾಯಪಟ್ಟಿದ್ದಾರೆ. ಸೀಟಿನಲ್ಲಿ ದಿಗ್ಗನೆ ನೇರವಾಗಿ ಕುಳಿತ ಕೀರ್ತಿಮಾನ್. ಅವನ ಕಣ್ಣು ಮನಸ್ಸು ಚುರುಕಾಗಿ ಮಿಕ್ಕ ವಿವರಗಳನ್ನು ಪರಿಶೀಲಿಸುತ್ತಿದೆ.

'ಆಕೆಯನ್ನು ನೀರಿನಲ್ಲಿ ಮುಳುಗಿ ಹಿಡಿಯಲು ತಲೆಯನ್ನು ನೀರಿನ ಅಡಿ ಯಲ್ಲಿ ಒತ್ತಿರುವುದಾಗಿಯೂ, ಆಕೆಯ ದೇಹದ ಪ್ರತಿಭಟನೆಯಿಂದ ಸುತ್ತಮುತ್ತಲಿನ ಕೊಳದ ಕಟ್ಟೆಗೆ ಆಕೆಯ ಮೈ ಕೈ ಬಡಿದಿರುವ ಗಾಯಗಳಿವೆ. ಇನ್ನು ಆಕೆಯ ಕೈಬೆರಳು ಅಥವಾ ಇನ್ನಾವ ಭಾಗದಲ್ಲಾಗಲೀ 'ಫಾರಿನ್ ಆಬ್ಜೆಕ್ಟ್ಸ್' (ಪರಕೀಯ ವಸ್ತು) ಅಂದರೆ ಆಕೆಯ ಸ್ವಂತವಲ್ಲದ ದೇಹದ ಸುಳಿವುಗಳು– ಕೂದಲು, ಉಗುರು, ಚರ್ಮ, ರಕ್ತ ಇತ್ಯಾದಿ ಯಾವುದೂ ಇಲ್ಲದಿರುವುದರಿಂದ ಅಕಸ್ಮಾತ್ ಯಾರಾದರೂ ಕೊಂದಿದ್ದೇ ಆದರೂ, ಆ ಕೊಲೆಗಾರನ ದೈಹಿಕ ಪುರಾವೆ ಯಾವುವೂ, ಕುರುಹಾಗಲೀ ಇಲ್ಲಿ ದೊರೆತಿಲ್ಲ. ಹೊರಗೆ ಕೊಳದ ಸುತ್ತಲಲ್ಲಿ ಎರಡು ಮುರುಟಿ ಎಸೆದ 555 ಸ್ಟೇಟ್ ಎಕ್ಸ್‌ಪ್ರೆಸ್ ಸಿಗರೇಟಿನ ತುಂಡುಗಳು ಮಾತ್ರ ಸಿಕ್ಕಿವೆ ಅಂದು ಪೋಲಿಸ್ ರಿಪೋರ್ಟ್ ಹೇಳಿದೆ.

ಅದೂ ಸಾಧಾರಣವಾಗಿ ಎಲ್ಲ ಶ್ರೀಮಂತ ವರ್ಗದವರೂ ಬಳಸುವ ಬ್ರಾಂಡ್ ಆದ್ದರಿಂದ ಯಾವ ನಿರ್ದಿಷ್ಟ ತೀರ್ಮಾನಕ್ಕೂ ಬರಲಾಗ ಲಿಲ್ಲವಂತೆ. ಆದರೆ ಕೊಲೆಯಾದವಳ ದೇಹದ ಬಲ ತೊಡೆಯ ಮೇಲೆ ಹುಟ್ಟು ಮಚ್ಚೆ ಇರುವುದಾಗಿಯೂ, ಪೋಲಿಸಿಗೆ ಬಲ್ಲ ಮಾಹಿತಿಯಿಂದ ಇದು ಅಂಚನಾ ದೇಸಾಯಿಯವರ ಪಾಲಿಸಿಯಲ್ಲಿ ಅದರ ಬಗ್ಗೆ ಉಲ್ಲೇಖವಾಗಿದೆ ಎಂದೂ ವರದಿಯಲ್ಲಿತ್ತು. ಆದ್ದರಿಂದ ಪೊಲೀಸಿಗೆ ತಿಳಿದ ಈ ಎಲ್ಲಾ ಮಾಹಿತಿ ಪ್ರಕಾರ ಸತ್ತ ಮಹಿಳೆ ಅಂಚನಾ ದೇಸಾಯಿಯೇ ಎಂದು ಪ್ರಥಮ ತೀರ್ಮಾನಕ್ಕೆ ಬಂದಿದ್ದರು. ಇದನ್ನು ಓದಿ ತಕ್ಷಣ ಕೀರ್ತೀಮಾನ್ ಬಾಸ್ ಭೀಮರಾಯರಿಗೆ ಫೋನಾಯಿಸಿ, 'ಈ ಪಾಲಿಸಿಯ ಕೇಸ್ ಇತ್ಯರ್ಥವಾಗಲು ತಡವಾಗಬಹುದು, ಪಾಲಿಸಿ ಅಂಚನಾ ಹೆಸರಿನಲ್ಲಿತ್ತಾದ್ದರಿಂದ ಅಸಹಜ ಸಾವಿನ ಸುಳಿವು ಇವೆ, ಆದ್ದರಿಂದ ಹಣ ಪಾವತಿಯನ್ನು ತಡೆಯಿರೆಂದು ತಿಳಿಸಿದಾಗ, ಅವರು ತನಗೆ ಇದು ಮೊದಲೇ ತಿಳಿದಿತ್ತೆಂಬಂತೆ ಗುಟುರು ಹಾಕಿ ನಾನೇನು ಹೇಳಿದ್ದೆ?' ಎಂದು ಗೊಣಗಿದರು.

'ನಮ್ಮ ಅನುಮಾನವಷ್ಟೆ ಸಾರ್, ಇನ್ನೂ ಕೊಲೆಯಾದದನ್ನು ರುಜುವಾತು ಮಾಡಿಲ್ಲ... ಯಾವುದಕ್ಕೂ ಇರಲಿ ಎಂದು' ಎಂದ ಯುವ ಪತ್ತೇದಾರ.

'ನೀನಿನ್ನೂ ಈಗ ಶುರು ಮಾಡಿದ್ದೀಯೆ, ನಾನು ಈ ಕೆಲಸ ಇಪ್ಪತ್ತೈದು ವರ್ಷ ಮುಂಚೆಯೆ ಶುರು ಮಾಡಿದ್ದೆ' ಎಂದು ಕೊಚ್ಚಿಕೊಂಡರು ಭೀಮರಾವ್.

'ಇನ್ನು ನಾನು ಶಶಿಧರ್ ದೇಸಾಯಿ ಮತ್ತಿತರ ಸಾಕ್ಷಿಗಳ ಜತೆ ತನಿಖೆ ನಡೆಸುತ್ತೇನೆ' ಎಂದು ತಿಳಿಸಿ ಅವರೊಂದಿಗೇ ಹೆಚ್ಚು ಮಾತು ಬೆಳೆಸದೇ ಹೊರಬಿದ್ದ ಕೀರ್ತಿಮಾನ್.

ಲಿಫ್ಟ್‌ನ ಬಳಿ ಬಂದಾಗ ಅದರಿಂದ ಶರಭ್ ಹೊರಬಿದ್ದ. ಅವನ ಮುಖದಲ್ಲಿ ಎರಡು ದಿನದ ಗಡ್ಡವಿತ್ತು, ಕಂಗಳು ನಿದ್ದೆ ಬಾರದಂತೆ ಕೆಂಪಗೆ ಕಳಾಹೀನವಾಗಿದ್ದವು.

'ಕೀರ್ತಿ, ನಂಗೂ ಗೊತ್ತಾಯಿತು.. ಭೀಮರಾವ್, ಅಂಚನಾ ತಲೆಗೆ ಏಟು ಬಿದ್ದು ಸತ್ತಳು. ಯಾರೋ ಕೊಳದಲ್ಲಿ ಮುಳುಗಿಸಿದಾರೆ ಅಂತ ವರದಿಯಲ್ಲಿರು ವುದು ನನ್ನ ಬಾಸಿಗೆ ಹೇಳಿದರಂತೆ...ಇನ್ನು ನನ್ನ ಕೆರಿಯರ್ ಇಲ್ಲಿ ಮುಗಿದ ಹಾಗೇ.. ಈ ಸುದ್ದಿ ಇನ್ನು ಎಲ್ಲರಿಗೂ ಹರಡುತ್ತದೆ, ನನ್ನ ಕರ್ಮ..' ಎಂದ ಮ್ಲಾನವದನನಾದ ಗೆಳೆಯನ ಭುಜ ತಟ್ಟಿದ ಕೀರ್ತಿಮಾನ್.

(ಸಶೇಷ)

## ಅದ್ಭುತ ಭಾಷೆ, ಮನಮೋಹಕ ಶೈಲಿ!

ಸರಸ್ವತಿ ನಟರಾಜ್ ಅವರ 'ಸಿಕ್ಕು' ಧಾರಾವಾಹಿಯಲ್ಲಿ ಬಳಸಿದ ಭಾಷಾ ಶೈಲಿ ಬಹಳ ಹಿಡಿಸಿತು. ಎಷ್ಟು ಗಂಭೀರ, ಎಷ್ಟು ಹಾರ್ದಿಕ, ಎಷ್ಟು ಮನಮೋಹಕ! ಕಥೆ ಸರಾಗವಾಗಿ, ಸುಖವಾಗಿ ಓದಿಸಿಕೊಂಡು ಹೋಯಿತು. ಮುಕ್ತಾಯದ ಸಂದೇಶ 'ಜೀವನ ಬರೀ ಸಿಕ್ಕಲ್ಲ. ಸಿಕ್ಕುಗಳನ್ನೆಲ್ಲ ಬಿಡಿಸುತ್ತಲೇ ಸಿಕ್ಕ ಸುಖಗಳದ್ದೂ ಲೆಕ್ಕವಿದೆ..!, ಅದ್ಭುತ.

–ಕೆ.ಎಂ. ಮಧ್ವರಾಯ, ಬೆಂಗಳೂರು, ಎಂ.ಮೃತ್ಯುಂಜಯಪ್ಪ, ಚಿತ್ರದುರ್ಗ, ಪೂರ್ಣಿಮಾ ಮೂರ್ತಿ ಬೆಂಗಳೂರು, ಮುಕುಂದ ಹೆರಕಲ್ಲ, ಕಲಬುರಗಿ, ಎಚ್. ಆನಂದಕುಮಾರ್, ಚಿತ್ರದುರ್ಗ, ಪ್ರಭಾ ನಾಗರಾಜ್, ಬೆಂಗಳೂರು, ಕೊಹಿಮ, ಬಸರಕೋಡು, ಶಕುಂತಲಾ ರೆಡ್ಡಿ,ರಾಯಾಪುರ, ಪಿ.ವಿ. ಶಾಂತಕುಮಾರಿ, ಮಂಗಳೂರು

### ಮನಮುಟ್ಟುವಂತಿತ್ತು

'ಸಿಕ್ಕು' ಧಾರಾವಾಹಿ ಮನಮುಟ್ಟುವಂತಿತ್ತು. ಒಂದೊಂದೇ ಸಿಕ್ಕನ್ನು ಬಿಡಿಸಿಕೊಂಡು ಸಾಗಿದ ಕಾದಂಬರಿಯಲ್ಲಿ ಭಾಷೆಯ ಹಿಡಿತದೊಂದಿಗೆ ಮನಮುಟ್ಟುವ ವಿಚಾರಲಹರಿಗಳು ತುಂಬಿತ್ತು.
ನನಗೆ ಭಿನ್ನವೆನಿಸಿದ್ದು ಪಾತ್ರಗಳ ಮಾತುಗಳನ್ನೇ ಬಳಸಿ ಕಥೆ ಹೆಣೆದಿರುವುದು. ಚಿತ್ರಾಳ ಅಪ್ಪನ ಮದುವೆ ಆಗುತ್ತೋ ಇಲ್ಲವೋ ಎಂಬ ಕುತೂಹಲ ಕೊನೆಯವರೆಗೂ ಇತ್ತು.

– ಸಮುದ್ರವಳ್ಳಿ ವಾಸು, ಆಲೂರು

### ಸಾಂಸಾರಿಕ ಸಿಕ್ಕುಗಳು

'ಸಿಕ್ಕು' ಧಾರಾವಾಹಿ ಕುತೂಹಲಕಾರಿ. ಸಂಸಾರದ ಸಿಕ್ಕಿನಲ್ಲಿ ಸಿಕ್ಕಿದ ಅಪ್ಪ ತಾಳ್ಮೆಯಿಂದ ಒಂದೊಂದಾಗಿ ಎಳೆಗಳನ್ನು ಬಿಡಿಸಿಕೊಂಡು ಹೊರಬಂದು ಮಗಳ ಮನೆಯಲ್ಲಿದ್ದರೂ ಸ್ವತಂತ್ರ ಪಕ್ಷಿಯಂತೆ ಜೀವಿಸುತ್ತಾ ಹೊಸ ಆವಿಷ್ಕಾರಗಳಲ್ಲಿ ತೊಡಗಿಸಿಕೊಂಡು ಮತ್ತೆ ಯಾವ ಸಿಕ್ಕಿನಲ್ಲಿ ಸಿಲುಕಿಕೊಳ್ಳುತ್ತಾರೊ ಎಂಬ ಆತಂಕದಲ್ಲಿ ಕುತೂಹಲವಾಗಿ ಓದಿಸಿಕೊಂಡು ಹೋಯಿತು.

– ಎಸ್. ವಿಜಯ ಗುರುರಾಜ, ಬೆಂಗಳೂರು

### ನೇರ ನಿರೂಪಣೆ, ಸುಲಲಿತ ಭಾಷೆ

ಧಾರಾವಾಹಿ ಸುಮಾರು 14 ಕಂತುಗಳಲ್ಲಿ ಓದುಗರನ್ನು ಹಿಡಿದಿಟ್ಟಿತ್ತು.




ನೇರ ನಿರೂಪಣೆ, ಸುಲಲಿತ ಭಾಷೆ, ಯಾವುದೇ ಹೆಚ್ಚಿನ ಭಾವುಕತೆಗೆ ಎಡೆಯಿಲ್ಲದೆ ಸರಾಗವಾಗಿ ಸಾಗಿತ್ತು. ಜೀವನದ ಅನೇಕ ಸಂದರ್ಭಗಳನ್ನು ಒಬ್ಬ ವ್ಯಕ್ತಿ ಸಾವಧಾನದಿಂದ ಎದುರಿಸಿ ಸ್ವಂತಿಕೆಗಿಂತ, ಇತರರ ಸುಖ ಸಂತೋಷಕ್ಕೆ ಬೆಲೆ ಕೊಟ್ಟು ಜವಾಬ್ದಾರಿ ನಿರ್ವಹಿಸುವ ದೊಡ್ಡ ಗುಣ ಇಂದು ಮರೆಯಾಗುತ್ತಿದೆ. ಅದೆಲ್ಲವನ್ನೂ ಸಂತಸದಿಂದಲೇ ಮುಗಿಸಿ ತನ್ನ ಕೊನೆಯ ದಿನಗಳಲ್ಲಿ ಒಂದು ನೆಲೆ ಕಂಡವರು ಶ್ಲಾಘನೀಯರೇ. ಅದಕ್ಕೆ ಅನುವು ಮಾಡಿಕೊಟ್ಟ ಮಗಳು, ಅಳಿಯ ಕೂಡ ಹೊಗಳಿಕೆಗೆ ಪಾತ್ರರಾಗುತ್ತಾರೆ. ಲೇಖಕಿಗೂ, ಈ ಧಾರಾವಾಹಿಯನ್ನು ಪ್ರಕಟಿಸಿದ 'ಸುಧಾ' ಬಳಗಕ್ಕೂ ವಂದನೆಗಳು.

– ಶ್ರೀನಾಥ್ ಕೊನೇಟಿ, ಬೆಂಗಳೂರು

### ಮನೋಜ್ಞ ಕಾದಂಬರಿ

'ಸಿಕ್ಕು' ಧಾರಾವಾಹಿ ಅತ್ಯಂತ ಸುಂದರ ಹಾಗೂ ಮನೋಜ್ಞವಾಗಿತ್ತು. ವಾರದ ಬರುವಿಕೆಯನ್ನೇ ನಿರೀಕ್ಷಿಸುವಂತೆ ಮಾಡುತ್ತಿದ್ದ ಧಾರಾವಾಹಿ ಇಷ್ಟು ಬೇಗ ಮುಗಿದುದ್ದು ನಿರಾಸೆ ಉಂಟು ಮಾಡಿತು. ವ್ಯಕ್ತಿಗಳ ನಡುವೆ ಸಂವಹನವೇ ಕಡಿಮೆಯಾಗಿರುವ ಈ ಕಾಲದಲ್ಲಿ ಭಾವನೆಗಳನ್ನು ಇಷ್ಟು ಸುಂದರ ಹಾಗೂ ಸುಲಭವಾಗಿ ಅರ್ಥೈಸಿ ಒಳ್ಳೆಯದನ್ನೇ ಯೋಚಿಸುವ ಚಿತ್ರಾ, ಅವಳ ತಂದೆ, ಸಕಾರಾತ್ಮಕವಾಗಿ ಸ್ಪಂದಿಸುವ ಶ್ರೀರಂಗಯ್ಯರವರ ಎಲ್ಲಾ ಕುಟುಂಬದ ಸದಸ್ಯರು ಒಂದು ನಾಗರಿಕ ಸಂಸ್ಕೃತಿಯನ್ನೇ ನಮ್ಮ ಕಣ್ಮುಂದೆ ತರುತ್ತಾರೆ. ಪಾತ್ರಗಳನ್ನು ಇಷ್ಟು ಸುಂದರವಾಗಿ ಚಿತ್ರಿಸಿರುವ ಲೇಖಕಿ ಸರಸ್ವತಿಯವರಿಗೆ ಧನ್ಯವಾದಗಳು.

–ಎ.ಎನ್.ಜೆ . ಆರಾಧ್ಯ, ಮುಂಬಯಿ

### ನೀರಸ ಕಾದಂಬರಿ

ನಾನು ಅಂದುಕೊಂಡಂತೆ ಕಾದಂಬರಿಯಲ್ಲಿ ಅನೇಕ ಸಿಕ್ಕುಗಳಿರಲಿಲ್ಲ. ಇದ್ದದ್ದು ಒಂದೇ ಸಿಕ್ಕು. ಅದನ್ನು ಕೂಡ ಸುಲಭವಾಗಿ ಬಿಡಿಸಲಾಗಿದೆ. ಒಟ್ಟಿನಲ್ಲಿ ನೀರಸ ಕಾದಂಬರಿ.

–ಪ್ರದೀಪ್ ಎನ್. ಚೆಲುವರಸನಕೊಪ್ಪಲು